# ಬಸ್ರೂರು ಮಾಡಿದ ಸೂಪರ್ ಗಿರ್ಮಿಟ್

**‘ಕೆಜಿಎಫ್’ ಖ್ಯಾತಿಯ ಸಂಗೀತ ಸಂಯೋಜಕ ರವಿ ಬಸ್ರೂರು ಹಿಂದೆಯೇ ನಿರ್ದೇಶನದ ಟೋಪಿಯನ್ನೂ ಧರಿಸಿದ್ದರು. ಈಗ ಅವರು ‘ಗಿರ್ಮಿಟ್’ಎಂಬ ವಿಶಿಷ್ಟ ಪ್ರಯತ್ನದೊಂದಿಗೆ ಪ್ರೇಕ್ಷಕರ ಎದುರು ಬರಲು ಸಿದ್ಧರಾಗಿದ್ದಾರೆ. ಈ ಚಿತ್ರ ನವೆಂಬರ್ 15ಕ್ಕೆ ಆರು ಭಾಷೆಗಳಲ್ಲಿ ಬಿಡುಗಡೆಯಾಗಲಿದೆ.**

■ ಪದ್ಮನಾಭ ಭಟ್

◆ ‘ಗಿರ್ಮಿಟ್’ ಸಿನಿಮಾ ಮಾಡಬೇಕು ಎಂದು ನಿಮಗೆ ಯಾಕೆ ಅನಿಸಿತು?

ನಾವೆಲ್ಲ ಸ್ಕೂಲಿಗೆ ಹೋಗಬೇಕಾದರೆ ರಾಮಾಯಣ, ಮಹಾಭಾರತ ಸಾಮಾಜಿಕ ನಾಟಕಗಳಲ್ಲೆಲ್ಲ ಮೀಸೆ ಹಚ್ಚಿಕೊಂಡು ಪಾರ್ಟ್ ಮಾಡಿದ್ವಿ. ಆದರೆ 90ರ ದಶಕದ ನಂತರ ಈ ಅಭ್ಯಾಸ ನಿಂತೇ ಹೋಯ್ತು. ಇತ್ತೀಚೆಗೆ ‘ಡ್ರಾಮಾ ಜ್ಯೂನಿಯರ್ಸ್’ ಶೋದಲ್ಲಿ ಮತ್ತೆ ಮಕ್ಕಳ ಮೂಲಕ ಅಂಥದ್ದೇ ಮನರಂಜನೆ ಆರಂಭವಾಯಿತು. ಆ ಶೋ ನನಗೆ ನನ್ನ ಬಾಲ್ಯವನ್ನು ನೆನಪಿಸಿತು. ಹಾಗೆಯೇ ಚಿಕ್ಕ ಮಕ್ಕಳು ಮೀಸೆ ಹಚ್ಚಿಕೊಂಡು ದೊಡ್ಡವರ ಹಾಗೆ ಆಡುವ ಫ್ಲಿಪ್‌ಕಾರ್ಟ್‌ನ ಜಾಹೀರಾತು ನೋಡಿ ತುಂಬ ಮಜವೆನಿಸಿತು. ಈ ಐಡಿಯಾವನ್ನೇ ಇಟ್ಟುಕೊಂಡು ಸಿನಿಮಾ ಮಾಡಿದರೆ ಹೇಗಿರುತ್ತದೆ ಅನಿಸಿತು. ‘ಗಿರ್ಮಿಟ್’ ಆರಂಭವಾಗಿದ್ದು ಹಾಗೆಯೇ.

◆ ಇದು ಯಾವ ರೀತಿಯ ಸಿನಿಮಾ?

ಈ ಸಿನಿಮಾದಲ್ಲಿ ಸುಮಾರು ಮುನ್ನೂರಕ್ಕೂ ಹೆಚ್ಚು ಮಕ್ಕಳಿದ್ದಾರೆ. ಸಾಧ್ಯವಾದಷ್ಟೂ ಹೆಚ್ಚು ಮಕ್ಕಳಿಗೆ ಅವಕಾಶ ಕೊಡಬೇಕು ಎಂಬುದು ನನ್ನ ಆಸೆ. ಎಲ್ಲ ಮಕ್ಕಳಿಗೂ ಸ್ಕ್ರೀನ್ ಪ್ರೆಸೆನ್ಸ್ ಇರಲು ಅನುಕೂಲವಾಗುವ ಹಾಗೆ ಒಂದು ಸಣ್ಣ ಕಥೆ ಇಟ್ಟುಕೊಂಡೆವು. ಇದೇನು ಓಹೋ ಎನ್ನುವಂಥ ಕಥೆ ಅಲ್ಲ. ಒಂದು ಸಾಧಾರಣ ಸಾಂಸಾರಿಕ ಕಥೆ ಅಷ್ಟೆ. ಒಂದು ಮದುವೆಯ ಸುತ್ತ ಇರುವ ಕಟ್ಟುಪಾಡುಗಳು, ಗೊಂದಲಗಳು, ಮಿಸ್ ಅಂಡರ್‌ಸ್ಟ್ಯಾಂಡಿಗ್‌ಗಳನ್ನೆಲ್ಲ ಇಟ್ಟುಕೊಂಡು ಮಾಡಿದ ಮಾಮೂಲಿ ಕಮರ್ಷಿಯಲ್ ಸಿನಿಮಾದ ಕಥೆಯೇ. ಅದನ್ನೇ ಮಕ್ಕಳಿಂದ ಮಾಡಿಸಿದ್ದೇವೆ ಅಷ್ಟೆ. ಇಲ್ಲಿ ಮಕ್ಕಳನ್ನು ಪರಿಚಯ ಮಾಡಿಸುವುದೇ ಮುಖ್ಯವಾಗಿತ್ತು.

ಈಗಿನ ಮಕ್ಕಳೂ ನಮ್ಮ ಜೊತೆಗೇ ಸಿನಿಮಾ ನೋಡ್ತಾರೆ. ಸಿನಿಮಾದಲ್ಲಿ ಫೈಟು, ಲವ್, ಕಾಮಿಡಿ ಪಂಚ್ ಎಲ್ಲಾ ಅವರಿಗೂ ಗೊತ್ತಾಗತ್ತೆ. ಈ ಸಿನಿಮಾದಲ್ಲಿ ಅವರಿಂದಲೇ ಅವೆಲ್ಲವನ್ನೂ ಮಾಡಿಸುತ್ತಿದ್ದೇವೆ ಅಷ್ಟೆ.

◆ ಈ ಸಿನಿಮಾ ಆರು ಭಾಷೆಗಳಲ್ಲಿ ಬಿಡುಗಡೆಯಾಗುತ್ತಿದೆ. ಬೇರೆ ಕಡೆಗೂ ಈ ಸಿನಿಮಾ ಸಲ್ಲುವ ಹಾಗಿದೆಯೇ?

ಯಾವುದೇ ವಿಶಿಷ್ಟ ಪ್ರಯತ್ನಗಳು ನಮ್ಮ ಶಯಖಿದಿಂದಲೇ ಬರಬೇಕು ಎಂಬ ಹಟ ನನಗಿಲ್ಲ. ಆದರೆ ಇಂಥ ಪ್ರಯತ್ನಗಳು ನಡೆದರೆ ಎಷ್ಟೋ ಜನರಿಗೆ ಅವಕಾಶ ಸಿಗುತ್ತದಲ್ವಾ? ಕರ್ನಾಟಕದಲ್ಲಿದ್ದರೂ, ಹೈದರಾಬಾದ್‌ನಲ್ಲಿದ್ದರೂ, ದೆಹಲಿಯಲ್ಲಿದ್ದರೂ ಮಕ್ಕಳು ಮಕ್ಕಳೇ; ಪ್ರತಿಭಾವಂತರು ಪ್ರತಿಭಾವಂತರೇ. ಈ ಸಿನಿಮಾದಿಂದ ಯಾರಾದರೂ ಸ್ಫೂರ್ತಿ ಪಡೆದುಕೊಂಡು ಮತ್ತೂ ಹೊಸ ಬಗೆಯ ಪ್ರಯತ್ನ ಮಾಡುವುದಾದರೆ ಮಾಡಲಿ ಬಿಡಿ. ನಾವೇನೂ ಬೇರೆ ಭಾಷೆಗಳಲ್ಲಿ ದೊಡ್ಡ ಮಟ್ಟದಲ್ಲಿ ರಿಲೀಸ್ ಮಾಡುತ್ತಿಲ್ಲ. ಬೇರೆ ಭಾಷೆಗಳಲ್ಲಿ ಒಂದೊಂದು ಚಿತ್ರಮಂದಿರ ಸಿಕ್ಕರೂ ಸಾಕು. ಅಲ್ಲಿಂದ ಸಾಕಷ್ಟು ಬೆಂಬಲ ಸಿಗುತ್ತದೆ ಎಂಬ ನಂಬಿಕೆ ಇದೆ.

◆ ಈ ಚಿತ್ರಕ್ಕೆ ಸಿನಿಮಾರಂಗದ ಹಲವು ನಟ–ನಟಿಯರು ಕಂಠದಾನ ಮಾಡಿದ್ದಾರಲ್ಲವೇ?

ಹೌದು. ಅವರಿಗೆ ನಾನು ಎಷ್ಟು ಧನ್ಯವಾದ ಹೇಳಿದರೂ ಸಾಲದು. ಇಂಥ ಪ್ರಯತ್ನವನ್ನು ಮೆಚ್ಚಿ ಬೆಂಬಲ ಕೊಡುವುದು ಸಣ್ಣ ವಿಷಯ ಅಲ್ಲ. ಯಶ್, ರಾಧಿಕಾ ಅಷ್ಟೇ ಅಲ್ಲ, ರಂಗಾಯಣ ರಘು, ಸುಧಾ ಬೆಳವಾಡಿ, ಅಚ್ಯುತ್ ಕುಮಾರ್, ತಾರಾ, ಮಜಾ ಟಾಕೀಸ್ ಪವನ್, ಸಾಧುಕೋಕಿಲ, ಅನುಪಮಾ ಭಟ್, ಅನುಪಮಾ ಗೌಡ ಹೀಗೆ ಕಂಠದಾನ ಮಾಡಿದವರ ದೊಡ್ಡ ಪಟ್ಟಿಯೇ ಇದೆ. ಅವರೆಲ್ಲರ ಬೆಂಬಲದಿಂದಲೇ ಇದು ಸಾಧ್ಯವಾದದ್ದು.



◆ ನೀವು ಜನಪ್ರಿಯ ಸಂಗೀತ ನಿರ್ದೇಶಕರು. ಆ ಕೆಲಸದ ನಡುವೆಯೂ ಇಂಥ ಪ್ರಯತ್ನ ಮಾಡಬೇಕು ಯಾಕನಿಸಿತು?

ಪ್ರತಿಯೊಬ್ಬರಿಗೂ ಜೀವನದಲ್ಲಿ ನಾನೇನಾದರೂ ಮಾಡಬೇಕು ಎಂದಿರುತ್ತದೆ. ಕೆಲವರಿಗೆ ಮಾತ್ರ ಅವಕಾಶ ಸಿಗುತ್ತದೆ. ಎಲ್ಲೋ ಹಳ್ಳಿಗಾಡಿನಲ್ಲಿ ಇದ್ದ ನನ್ನನ್ನು ಈ ಮಟ್ಟಕ್ಕೆ ಬೆಳೆಸಿದ್ದು ಜನರು ಮತ್ತು ಚಿತ್ರರಂಗದವರು. ನನಗೆ ಕೊಡುವುದನ್ನೆಲ್ಲ ಭಗವಂತ ಕೊಟ್ಟುಬಿಟ್ಟಿದ್ದಾನೆ. ನನಗೆ ಸಿಗಬೇಕಾದ ಪ್ರಸಿದ್ಧಿ ಎಲ್ಲ ಈಗಾಗಲೇ ಸಿಕ್ಕಿದೆ. ಈಗ ನನ್ನ ಕೆಲಸ ಏನು? ನಾನು ಇನ್ನಷ್ಟು ಪ್ರತಿಭಾವಂತರನ್ನು ಗುರ್ತಿಸಿ ಅವರಿಗೆ ಅವಕಾಶ ಕೊಡಬೇಕು. ಅದು ನನ್ನ ಜವಾಬ್ದಾರಿ. ಅದನ್ನು ಮಾಡದೆ ನಾನೊಬ್ಬನೇ ಬೆಳೆದರೆ ಸಾಕು ಎಂದು ಕೂರುವುದು ಸರಿಯಲ್ಲ.

ಯಶಸ್ಸು, ವೈಫಲ್ಯ ಅನ್ನುವುದು ಯಾರ ಕೈಯಲ್ಲೂ ಇರುವುದಿಲ್ಲ. ಪ್ರಯತ್ನ ಮಾಡುವುದಷ್ಟೇ ನಮ್ಮ ಕೈಯಲ್ಲಿರುವುದು. ಅದನ್ನು ಮಾಡದೇ ಇದ್ದರೆ ಯಶಸ್ಸು, ವೈಫಲ್ಯ ಯಾವುದೂ ಗೊತ್ತಾಗುವುದಿಲ್ಲ. ಇದೇ ಉದ್ದೇಶದಿಂದ ಪ್ರತಿವರ್ಷ ಇಂಥ ಪ್ರಯತ್ನಗಳನ್ನು ಮಾಡುತ್ತಿದ್ದೇನೆ. ಮುಂದೆಯೂ ಮಾಡುತ್ತಲೇ ಇರುತ್ತೇನೆ. ■

